12.	Karnataka Leather Industries Development Corporation Ltd., (LIDKAR)	1. Sri. S.Swathantra Rao, IAS, Chairman	SC
		2. Sri. R.Basavaraju, M.D.	SC
13.	Mysore Paper Mills Ltd.,	1. Sri. Gopal Reddy, IAS Chairman & Managing Director	SC
		2. Sri. Muniyappa, Director	SC
14.	Mysore Electricals Ltd.,	Sri. S.Swatantra Rao, IAS, Director	SC
15.	Mysore Acetate Co., Ltd.,	Sri. S.Swatantra Rao, IAS, Director	SC
16.	Mysore Lamp Works Ltd.,	1. Sri. C.Muniswamy, IAS, Chairman	SC
		2. Sri. Subhir Hari Singh, IAS Managing Director	SC
		3. Sri. P.Narasimhamurthy Director	SC
		4. Sri. S.Swatantra Rao, IAS	SC
17.	K S T(P) Ltd.,	1. Sri. Gokulam, Chairman	SC
		2. Sri. M.Eraiah, Director	SC
		3. Sri. H.Hanumantharaya Managing Director. I.C	SC
18.	Karnataka Small Industries Marketing Corporation. Ltd.,	Sri. E. Venkataiah, Director	SC

ವಿಷಯ:- ಹರಿಜನ ಗಿರಿಜನ ಮೀಸಲಾತಿಯನ್ನು ಕೈಗಾರಿಕೆಗಳಲ್ಲಿ ಕಾಪಾಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1584 (2314)

ಶ್ರೀ ಕರಿಯಣ್ಣ (ಹೊಳೆ ಹೊನ್ನೂರು):- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಸರ್ಕಾರಿ ಸ್ವಾಮ್ಯದ ಕೆಲವು ಕೈಗಾರಿಕೆಗಳನ್ನು ಮಾರಾಟ ಮಾಡುತ್ತಿರುವುದರಿಂದ ಇಲ್ಲಿ ಕೆಲಸ ಮಾಡುತ್ತಿರುವ ಹರಿಜನ ಗಿರಿಜನರಿಗೆ ಮೀಸಲಾತಿಯಿಂದ ಸಿಗುತ್ತಿದ್ದ ಸಾಮಾಜಿಕ ನ್ಯಾಯಕ್ಕೆ ಅನ್ಯಾಯವಾಗುವುದಿಲ್ಲವೆ?

ಆ ಹರಿಜನ ಗಿರಿಜನರಿಗೆ ಇದರಿಂದ ಆಗುವ ಅನ್ಯಾಯ , ಸರ್ಕಾರದಿಂದ ಯಾವ ರೀತಿಯ ಪರಿಹಾರವನ್ನು

ಕೊಡಲಾಗುವುದು?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಉ ಕೆಲವು ಕೈಗಾರಿಕೆಗಳನ್ನು ಮುಚ್ಚಲು ಸರ್ಕಾರ ಕ್ರಮ ತೆಗೆದುಕೊಂಡಿದೆ. ಇದರಿಂದ ಅಲ್ಲಿನ ನೌಕರರಿಗೆ (ಹರಿಜನ ಗಿರಿಜನ ನೌಕರರೂ ಸೇರಿ) ಅನ್ಯಾಯ ಆಗದಿರಲಿ ಎಂಬ ಉದ್ದೇಶದಿಂದ ಸರ್ಕಾರವು ಅವರುಗಳಿಗೆ ತಕ್ಕ ತರಬೇತಿ ಮುಂತಾದುವುಗಳನ್ನು ಒದಗಿಸಿ ಬೇರೆ ಎಲ್ಲಾದರೂ ಒಂದು ಕಡೆ ಇವರುಗಳನ್ನು ಪುನರ್ ನೇಮಕ ಮಾಡಲು ಕ್ರಮಗಳನ್ನು ಕೈಗೊಳ್ಳುವುದು.

ಆ ಉದ್ಭವಿಸುವುದಿಲ್ಲ.

ವಿಷಯ:- ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಕ್ಯಾಪಿಟೇಶನ್ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1585 (2315)

ಶ್ರೀ ಕರಿಯಣ್ಣ (ಹೊಳೆ ಹೊನ್ನೂರು):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.,

ಎ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಕ್ಯಾಪಿಟೇಷನ್ ಫೀಯನ್ನು ವರ್ಷಕ್ಕೆ ಇಷ್ಟೆಂದು ಸರ್ಕಾರ ನಿಗಧಿ ಮಾಡಿದೆಯೇ ?

ಆ ಕ್ಯಾಪಿಟೇಷನ್ ಫೀ ಪಡೆಯಲು ಎಲ್ಲಾ ಖಾಸಗಿ ಮೆಡಿಕಲ್ ಕಾಲೇಜುಗಳು ಮುಂದಿರುವುದರಿಂದ ಎಲ್ಲಾ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಅಥವಾ ಸರ್ಕಾರದ ಯಾವುದಾದರೂ ಒಂದು ನಿಯಮದ ಪ್ರಕಾರ ಸರ್ಕಾರ ಏಕೆ ಹಂಚಬಾರದು ?

ಶ್ರೀ ಜಿ.ಪುಟ್ಟಸ್ವಾಮಿಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಎ ಇಲ್ಲ.

ಆ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿನ ಆಡಳಿತ ಮಂಡಳಿಯ ಪಾಲಿನ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ನೀಡಬೇಕೆಂಬ ವಿಚಾರ ರಾಜ್ಯದ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ವಿಚಾರಣೆಯಲ್ಲಿರುತ್ತದೆ.

ವಿಷಯ:- ಬೈಲಹೊಂಗಲ ತಾಲ್ಲೂಕು ನೇಸರ್ಗಿ ಗ್ರಾಮದಲ್ಲಿ ಪೋಸ್ಟ್ ಮೆಟ್ರಿಕ್ಯುಲೇಟ್ ಬಿಸಿಎಂ ಹಾಸ್ಟೆಲ್ ಪ್ರಾರಂಭ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1587 (2338)

ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಎ ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕು ನೇಸರ್ಗಿ ಗ್ರಾಮದಲ್ಲಿ ಜೂನಿಯರ್ ಕಾಲೇಜು ಹಾಗೂ ಪದವೀ ಕಾಲೇಜು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ ಪದವಿ ಕಾಲೇಜಿನಲ್ಲಿ ಹಾಗೂ ಜೂನಿಯರ್ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಲಭ್ಯ ಇಲ್ಲದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ ಹಾಗಿದ್ದಲ್ಲಿ ಪದವಿ ಪೂರ್ವ ಹಾಗೂ ಜೂನಿಯರ್ ಕಾಲೇಜುಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಇಲ್ಲಿ ಪೊಸ್ಟ್ ಮೆಟ್ರಿಕ್ಯುಲೇಟ್ ಬಿಸಿಎಂ ಹಾಸ್ಟೆಲ್ ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವವರೇ.?

ಶ್ರೀ ಬಿ.ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಉ ಹೌದು.